

# ಟ್ಯಾಟೂ ಸುರಕ್ಷಿತವೇ?

ಟ್ಯಾಟೂ ಹಾಕಲು ಬಳಸಿದ ಸೂಜಿಯನ್ನೇ ಬಳಸುವುದರಿಂದ ಚರ್ಮರೋಗ, ಎಚ್‌ಐವಿಯಂತಹ ಸೋಂಕು ಹರಡುವ ಸಾಧ್ಯತೆ ಇದೆ. ಹೀಗಾಗಿ ಟ್ಯಾಟೂ ಹಾಕುವುದನ್ನು ನಿಷೇಧಿಸಬೇಕಾಗಿದೆ ಎಂಬುದು ಇತ್ತೀಚಿನ ಸುದ್ದಿ. ಅದೇ ರೀತಿ ಟ್ಯಾಟೂ ಹಾಕಲು ಬಳಸುವ ಸೂಜಿ ಹಾಗೂ ಇಂಕ್ ಬಗ್ಗೆ ತಕರಾರುಗಳೂ ಎದ್ದಿವೆ. ಈ ಟ್ಯಾಟೂ ಇಂಕ್‌ನಲ್ಲಿ ಇರುವ ಮೈಕ್ರೊ ಆರ್ಗಾನಿಸಂ (micro organism) ಮತ್ತು ಹೆವಿ ಮೆಟಲ್ಸ್ (Heavy metals) ಚರ್ಮದ ಮೂಲಕ ದೇಹವನ್ನು ಪ್ರವೇಶಿಸುತ್ತವೆ. ಇದರಿಂದ ಅನೇಕ ಚರ್ಮರೋಗಗಳು, ಬ್ಯಾಕ್ಟೀರಿಯಾ, ವೈರಸ್, ಫಂಗಸ್ ಸೋಂಕು ತಗುಲಿ ಅನೇಕ ರೋಗಗಳಿಗೆ ತುತ್ತಾಗುವ ಸಾಧ್ಯತೆಗಳಿವೆ. ಈ ಕುರಿತಂತೆ ನಿಯಮಗಳನ್ನು ರೂಪಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ. ಹೀಗಾಗಿ ನವದೆಹಲಿಯಲ್ಲಿರುವ ಡ್ರಗ್ಸ್ ಕಂಟ್ರೋಲರ್ ಜನರಲ್ ಅವರು ಬ್ಯೂರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ ಪ್ರಕಾರ ಮಾನದಂಡ ರೂಪಿಸಬೇಕು. ಈ ವಿಚಾರ ಈಗ ಚರ್ಚೆಗೆ ಗ್ರಾಸವಾಗಿದೆ.

ಟ್ಯಾಟೂಗೆ ಬಳಸುವ ಇಂಕ್‌ನಲ್ಲಿ ಸೆಲೆನಿಯಂ, ಕ್ರೋಮಿಯಂ, ಪ್ಲಾಟಿನಂ, ಆರ್ಸೆನಿಕ್ ಮುಂತಾದ ಅಂಶಗಳಿರುವುದು ಪತ್ತೆಯಾಗಿದ್ದು, ಇದರ ಬಳಕೆ ಆರೋಗ್ಯದ ದೃಷ್ಟಿಯಿಂದ ಹಿತಕರವಲ್ಲ ಎಂಬುದು ಅಧ್ಯಯನ ಕೈಗೊಂಡವರ ವಾದ.

## ಟ್ಯಾಟೂ ಶಾಯಿಯಲ್ಲಿ ಏನಿದೆ?

ಎಲ್ಲಾ ಶಾಯಿಗಳು ಒಂದು ಅಥವಾ ಹೆಚ್ಚಿನ ವರ್ಣದ್ರವ್ಯಗಳಿಂದ ಮಾಡಲ್ಪಟ್ಟಿರುತ್ತವೆ. 20ನೇ ಶತಮಾನದ ಮೊದಲು, ಹಚ್ಚೆ ಹಾಕುವಲ್ಲಿ ಬಳಸಲಾದ ವರ್ಣದ್ರವ್ಯಗಳಲ್ಲಿ ಬೂದಿ, ಇದ್ದಿಲು, ಖನಿಜ ಅಥವಾ ಇತರ ನೈಸರ್ಗಿಕ ವಸ್ತುಗಳು ಸೇರಿದ್ದವು. ಆದರೆ 20ನೇ ಶತಮಾನದ ಮಧ್ಯಭಾಗದಲ್ಲಿ ಹಚ್ಚೆ ಕಲಾವಿದರು ವರ್ಣದ್ರವ್ಯಗಳು ಮತ್ತು ಬಣ್ಣಗಳನ್ನು ಬಳಸಿ ತಮ್ಮದೇ ಆದ ಶಾಯಿಗಳನ್ನು ತಯಾರಿಸಲು ಪ್ರಾರಂಭಿಸಿದರು. ಇಂದು ಟ್ಯಾಟೂಗಳಲ್ಲಿ ಬಳಸಲಾಗುವ ಬಹುತೇಕ ಎಲ್ಲಾ ವರ್ಣದ್ರವ್ಯಗಳು (ಬಿಳಿ ಮತ್ತು ಕಪ್ಪು ಹೊರತುಪಡಿಸಿ) ಪ್ರೊಫಿಲೀನ್ ಗ್ಲೈಕೋಲ್ ಎಂಬ ರಾಸಾಯನಿಕವನ್ನು ಒಳಗೊಂಡಿವೆ, ಇದು ಕೆಲವರಿಗೆ ಚರ್ಮದ ದದ್ದು, ತುರಿಕೆ, ಗುಳ್ಳೆ ಹಾಗೂ ಅಲರ್ಜಿಯನ್ನು ಉಂಟು ಮಾಡಬಹುದು ಎಂಬುದನ್ನು ಅಧ್ಯಯನ ಸಾಬೀತುಪಡಿಸಿದೆ. ಅಲ್ಲದೆ ಬಾಣಂತಿಯರು ಟ್ಯಾಟೂ ಹಾಕಿಸಿಕೊಂಡರೆ ಅದು ಸ್ತನ್ಯಪಾನದ ಮೂಲಕ ಶಿಶುವಿಗೆ ಹರಡಬಹುದು ಮತ್ತು ಶಿಶುಗಳಲ್ಲಿ ವಾಂತಿ ಮತ್ತು ನಿರ್ಜಲೀಕರಣಕ್ಕೆ ಕಾರಣವಾಗಬಹುದು ಎನ್ನುತ್ತಾರೆ ವೈದ್ಯರು.

ಸಾಮಗ್ರಿಗಳ ಜೊತೆ ಹಚ್ಚೆ ಹಾಕುತ್ತಿದ್ದ ವ್ಯಾಪಾರಿಗಳು, ಈಗ ಟ್ಯಾಟೂ ಪಾರ್ಲರ್‌ಗಳನ್ನೇ ತೆರೆದಿದ್ದಾರೆ. ಅತ್ಯಾಧುನಿಕ ಸಾಮಗ್ರಿಗಳನ್ನು ಒಳಗೊಂಡ ಈ ಪಾರ್ಲರ್‌ಗಳಲ್ಲಿ ವಿವಿಧ ಬಣ್ಣಗಳನ್ನು ಬಳಸಲಾಗುತ್ತಿದೆ ಮತ್ತು ವಿವಿಧ ಸೂಜಿಗಳನ್ನು ಬಳಸಲಾಗುತ್ತದೆ. ಅಲ್ಲಿ ನಮಗೆ ಇಷ್ಟಬಂದ ಡಿಸೈನ್ ಹಾಕಿಸಿಕೊಳ್ಳಬಹುದು. ಈಗ ಹೆಸರು ಬರೆಸಿಕೊಳ್ಳುವವರ ಕ್ರೇಜ್ ತುಂಬಾ ಕಡಿಮೆಯಾಗಿದೆ.

ವಿನ್ಯಾಸಕಾರರು ಕೈಗಳ ಮೇಲೆ, ಕಾಲಿನ ಮೇಲೆ, ಭುಜದ ಮೇಲೆ ಚಿತ್ರ, ವಿಚಿತ್ರ ವಿನ್ಯಾಸಗಳನ್ನು ನಿರ್ಮಿಸುತ್ತಿದ್ದಾರೆ. ಪ್ರಾಣಿ, ಪಕ್ಷಿ, ಹೂಗಳು, ಡ್ರ್ಯಾಗನ್ ಚಿತ್ರ, ಮನುಷ್ಯನ ವಿವಿಧ ಮುಖಭಾವ ಹೊಂದಿದ ಚಿತ್ರಗಳು ಈಗ ಪ್ರಚಲಿತದಲ್ಲಿವೆ. ಈ ಟ್ಯಾಟೂಗಳಲ್ಲಿ ಕೂಡ ಎರಡು ಪ್ರಕಾರಗಳಿವೆ. ಶಾಶ್ವತ ಹಚ್ಚೆ ಮತ್ತು ತಾತ್ಕಾಲಿಕ ಹಚ್ಚೆ. ಹೆಸರೇ ಹೇಳುವಂತೆ ಶಾಶ್ವತ ಹಚ್ಚೆ ಹಾಕಿಸಿಕೊಂಡರೆ ಜೀವನಪೂರ್ತಿ ಒಂದೇ ಡಿಸೈನ್ ಹಾಕಿಕೊಂಡಿರಬೇಕು. ಇದನ್ನು ತೆಗೆಯುವುದು ಬಹಳ ಕಷ್ಟ. ತೆಗೆಯಲೇಬೇಕು ಎಂದರೆ ಆಪರೇಷನ್ ಮಾಡಿಯೇ ತೆಗೆಯಬೇಕು. ಇನ್ನು ತಾತ್ಕಾಲಿಕ ಹಚ್ಚೆ ಎಂದರೆ ಇದು ಬರೀ ಒಂದು ವಾರ ಮಾತ್ರ ಇರುತ್ತದೆ. ಇದರ ಬೆಲೆಯೂ ಕಡಿಮೆ. ಈ ತಾತ್ಕಾಲಿಕ ಹಚ್ಚೆಗೆ ರೆಡಿಮೇಡ್ ಸ್ಟಿಕ್ಕರ್ ಬಳಸಲಾಗುತ್ತದೆ. ಇಲ್ಲಿ ಸೂಜಿಗಳನ್ನು ಬಳಸಲಾಗುವುದಿಲ್ಲ ಮತ್ತು ಸಂದರ್ಭಕ್ಕೆ ತಕ್ಕಂತೆ ವಿವಿಧ ರೀತಿಯ ವಿನ್ಯಾಸಗಳನ್ನು ಬದಲಿಸಿಕೊಳ್ಳಬಹುದು. ಆದ್ದರಿಂದ ಫ್ಯಾಷನ್‌ಪ್ರಿಯರಿಗೆ ತಾತ್ಕಾಲಿಕ ಹಚ್ಚೆಯ ಮೇಲೆಯೇ ಒಲವು ಜಾಸ್ತಿ. ತಮಗೆ ಬೇಕಾದಾಗ ಬದಲಿಸಬಹುದು ಎಂದು.

ಟ್ಯಾಟೂ ಆಭರಣಗಳಲ್ಲಿ ಮುಖ್ಯವಾಗಿ ಬೆನ್ನಿನ ಹಿಂಭಾಗದಲ್ಲಿ ಸಿಂಗಲ್ ಲೇಯರ್, ಡಬಲ್ ಲೇಯರ್ ಹಾಗೂ ಮಲ್ಟಿ ಲೇಯರ್ ಹಾರ, ಚೋಕರ್ ವಿನ್ಯಾಸಗಳು ಗಮನಸೆಳೆಯುತ್ತವೆ. ಮುತ್ತಿನ ಹಾರದಿಂದ ಹಿಡಿದು ವಿವಿಧ ಸ್ಟೋನ್‌ಗಳ ವಿನ್ಯಾಸಗಳನ್ನೂ ಕೂಡ ಟ್ಯಾಟೂನಲ್ಲಿ ಮೂಡಿಸಲಾಗುತ್ತದೆ. ಇನ್ನು ಕೈಗಳ ಮೇಲೆ ನಾಲ್ಕಾರು ಬಳೆಗಳನ್ನು ಹೋಲುವ ವಿನ್ಯಾಸಗಳು, ಕಡಗ, ಬ್ರೇಸ್ಲೆಟ್ ಮಾದರಿಯಲ್ಲಿ ಚಿತ್ತಾರ ಮೂಡಿಸುವುದರ ಜೊತೆಗೆ ಇದರಲ್ಲೂ ವಿವಿಧ ವಿನ್ಯಾಸದ ಹೂವು, ಹೆಸರು, ಬರಹಗಳು ಮೋಡಿ ಮಾಡುತ್ತಿವೆ. ಇಂದಿನ ಹೊಸ ಟ್ರೆಂಡ್ ಎಂದರೆ ಕಾಲುಗಳಿಗೆ ಅಂದವನ್ನು ಹೆಚ್ಚಿಸುವ ಹಾಗೂ ಸ್ಟೈಲಿಶ್ ಲುಕ್ ನೀಡುವ ಕಾಲ್ಗೆಜ್ಜೆ ಟ್ಯಾಟೂಗಳು. ಇದರಲ್ಲಿಯೂ ಸಿಂಗಲ್ ಲೇಯರ್ ಹಾಗೂ ಮಲ್ಟಿ ಲೇಯರ್ ವಿನ್ಯಾಸಗಳು ಇವೆ. ಅದೇ ರೀತಿ ಹೂವಿನ ವಿನ್ಯಾಸ ಹಾಗೂ ನಾನಾ ಬಗೆಯ ಚಿಹ್ನೆ ಒಳಗೊಂಡ ಎಳೆಗಳು ಎಲ್ಲರ ಗಮನಸೆಳೆಯುತ್ತವೆ. ತೋಳುಗಳ ಮೇಲಿನ ಟ್ಯಾಟೂಗಳು ಎಲ್ಲರ ಆಕರ್ಷಣೆಯ ಕೇಂದ್ರವಾಗುತ್ತಿವೆ. ಇದರಲ್ಲೂ ಹಲವು ವಿನ್ಯಾಸಗಳಿದ್ದು, ಸಾಂಪ್ರದಾಯಿಕ ಹಾಗೂ ಮಾಡರ್ನ್ ಲುಕ್ ಹೊಂದಿರುವ ಆಭರಣ ಶೈಲಿಯ ಚಿತ್ತಾರ ಮೂಡುತ್ತಿವೆ.

## ಟ್ಯಾಟೂ ಹಾಕಿಸುವಾಗ ಗಮನವಿರಲಿ...

- ಒಬ್ಬರಿಗೆ ಟ್ಯಾಟೂ ತೆಗೆಯಲು ಬಳಸಿದ ಸೂಜಿಗಳನ್ನು ಮತ್ತೊಬ್ಬರಿಗೆ ಬಳಸಬಾರದು.
- ಟ್ಯಾಟೂ ತೆಗೆಯಲು ಬಳಸುವ ಬಣ್ಣ ಗುಣಮಟ್ಟದ್ದಾಗಿರಬೇಕು.
- ಚರ್ಮಕ್ಕೆ ಹೊಂದಿಕೆಯಾಗುವಂತಹ ಬಣ್ಣವನ್ನೇ ಬಳಸಬೇಕು. ಇಲ್ಲದಿದ್ದರೆ ಚರ್ಮಕ್ಕೆ ಬಣ್ಣದಿಂದ ಅಲರ್ಜಿ ಬರಬಹುದು.
- ನಮಗೆ ಬೇಕಾದ ವಿನ್ಯಾಸವನ್ನು ಮೊದಲೇ ನಿರ್ಧರಿಸಿಕೊಳ್ಳಬೇಕು. ಇಲ್ಲದಿದ್ದರೆ ಚರ್ಮಕ್ಕೆ ಹಾನಿಯಾಗುವ ಸಂಭವ ಜಾಸ್ತಿ. ■

■ ಉಷಾರಾಣಿ ಎಂ.ಎಸ್.